# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

## ನಂಜನಗೂಡು

**ಸಿ.ಸಿ. ನಂ.1258-2016** **ಪಿ .ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಮಲ್ಲೇಗೌಡ ಬಿನ್ ಲೇ.ಮಹದೇವಮ್ಮ<br>47 ವರ್ಷ<br>ವ್ಯವಸಾಯ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 03-03-2022. |

**ಮುಂದುವರೆದ ಮುಖ್ಯ ವಿಚಾರಣೆಃ ಪಿರ್ಯಾದಿ ಪರ ಶ್ರೀ ಕೆ.ಎಸ್.ಎಂ ವಕೀಲರಿಂದಃ**

**ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯ ಸತ್ಯದಿಂದ ಕೂಡಿದ್ದು ಅದನ್ನು ನಾನೇ ಹೇಳಿ ಬರೆಯಿಸಿ ಸಹಿ ಮಾಡಿರುತ್ತೇನೆ.**

ಆರೋಪಿ ನನಗೆ ಕೊಟ್ಟ ಚೆಕ್ಕನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-1 ಎಂದು, ಅದರ ಮೇಲಿರುವ ಆರೋಪಿಯ ಸಹಿಯನ್ನು ನಿಪಿ-1(ಎ) ಎಂದು, ದಿಃ12-04-2016 ರಂದು ಬ್ಯಾಂಕ್ ನವರು ಕೊಟ್ಟ ಹಿಂಬರಹವನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-2 ಎಂದು, ದಿಃ20-04-2016 ರಂದು ನಾನು ವಕೀಲರ ಮೂಲಕ ಆರೋಪಿಗೆ ಕಳುಹಿಸಿದ ನೋಟಿಸ್‌ನ ಕಛೇರಿ ಪ್ರತಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-3 ಎಂದು, ಆರೋಪಿಗೆ ನೋಟಿಸ್ ಕಳುಹಿಸಿದ ಬಗ್ಗೆ ಅಂಚೆ ರಶೀದಿಯನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-4 ಎಂದು, ಆರೋಪಿಯ ಸರಿಯಾದ ವಿಳಾಸಕ್ಕೆ ಕಳುಹಿಸಿದ ನೋಟಿಸ್‌ನ ಅಂಚೆ ಲಕೋಟೆ 'ವಿಳಾಸದಾರರು ಕೆಲಸಕ್ಕೆ ಬೇರೆ ಊರಿಗೆ ಹೋಗಿರುವುದರಿಂದ ಪಾವತಿಗೆ ಅವಕಾಶ ಇಲ್ಲದ ಕಾರಣ ಸೆಂಡರ್ಗೆ ಹಿಂದಿರುಗಿಸಿದೆ' ಎಂಬ ಹಿಂಬರಹದೊಂದಿಗೆ ಹಿಂದಿರುಗಿ ಬಂದಿದ್ದು ಹಾಜರುಪಡಿಸುತ್ತಿದ್ದು ಅದನ್ನು ನಿಪಿ-5 ಎಂದು, ಸದರಿ ಅಂಚೆ ಲಕೋಟೆಯನ್ನು ಈಗ ತೆಗೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ ಅದರಲ್ಲಿನ ದಿ.20-04-2016 ರ ನೋಟಿಸ್‌ನ್ನು ಅದನ್ನು ನಿಪಿ-5(ಎ) ಎಂದು, ದಿ.11-09-2014 ರಂದು ನನ್ನ ಹೆಂಡತಿ ಶಿವಮ್ಮ ನಮಗೆ ಸೇರಿದ ಸರ್ವೇ ನಂ.362 ಹೆಗ್ಗಡಹಳ್ಳಿ ಗ್ರಾಮದ 3 ಎಕರೆ 15 ಗುಂಟೆ ಜಮೀನನ್ನು ನನ್ನ ಮಗಳಿಗೆ ಶುದ್ಧ ಕ್ರಯ ಪತ್ರ

ಮುಖಾಂತರ ಮಾರಾಟ ಮಾಡಿದ್ದು ಈ ಸಂಬಂಧ ನಾನು ನೋಂದಾಯಿತ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ–6 ಎಂದು, ನಾನು ನನ್ನ ಹೆಂಡತಿ ಹಾಗೂ ನನ್ನ ಮಗಳು ಮತ್ತು ನನ್ನ ಅಳಿಯ ಹಾಗೂ ನನ್ನ ಮೈನರ್ ಮೊಮ್ಮಕ್ಕಳು ದಿ.12–03–2015 ರಂದು ಮೇಲೆ ಹೇಳಿದ ಸ್ವತ್ತನ್ನು ಜಯಲಕ್ಷ್ಮೀ ಎಂಬುವವರಿಗೆ ಕ್ರಯಕ್ಕೆ ನೀಡಿದ್ದು ಸದರಿ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ–7 ಎಂದು ಗುರುತಿಸಲಾಯಿತು.

(ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**